# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 164 | Pages. 2 | Date: 04-05-2025, SUNDAY | RNI NO: KARKAN/2024/89601

ಸಂಪುಟ : 01 - ಸಂಚಿಕೆ : 164 - ಪುಟಗಳು : 2 - 04 ಮೇ 2025 ಭಾನುವಾರ | Ph: 8762954248 | ದರ : ₹1


# ಪರಿಶಿಷ್ಟ ಜಾತಿ ಸಮೀಕ್ಷೆ : ನಿಖರ ಮಾಹಿತಿ ನೀಡಿ

## ಆದಿ ಆಂಧ್ರ, ದ್ರಾವಿಡ, ಕರ್ನಾಟಕ ಮೂಲ ಜಾತಿಯಲ್ಲ | 101 ಜಾತಿ ಪರಿಗಣನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆಯು ಮೇ 5 ರಿಂದ 17ರ ವರೆಗೆ ಜಿಲ್ಲೆಯಲ್ಲಿ ನಡೆಯಲಿದೆ. ಯಾವುದೇ ಗೊಂದಲವಿಲ್ಲದಂತೆ ಗಣತಿದಾರರಿಗೆ ನಿಖರ ಮಾಹಿತಿ ನೀಡಬೇಕು ಎಂದು ಜಿಲ್ಲಾಧಿಕಾರಿ ಸಿ. ಸತ್ಯಭಾಮ ಸೂಚನೆ ನೀಡಿದ್ದಾರೆ.

ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಶನಿವಾರ ಸಮೀಕ್ಷೆ ಕುರಿತು ಹಮ್ಮಿಕೊಂಡಿದ್ದ ಸಭೆಯಲ್ಲಿ ಮಾತನಾಡಿ, ಗಣತಿದಾರರು ಬೆಳಿಗ್ಗೆ 6.30 ರಿಂದ ಸಂಜೆ 6ರ ವರೆಗೆ ಮನೆ ಮನೆಗೆ ಭೇಟಿ ನೀಡಲಿದ್ದಾರೆ. ಗಣತಿ ಕಾರ್ಯ ಸುಗಮವಾಗಿ ನಡೆಯುವ ನಿಟ್ಟಿನಲ್ಲಿ ಯಾರ ಒತ್ತಡಕ್ಕೂ ಒಳಗಾಗದೆ ನಿಸ್ಸಂಕೋಚವಾಗಿ ಜಾತಿ ಯಾವುದು ಎಂಬ ನಿಖರ ಮಾಹಿತಿಯನ್ನುಗಣತಿದಾರರಿಗೆ ನೀಡುವಂತೆ ತಿಳಿಸಿದರು.



ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಇರುವ ಜಾತಿಗಳನ್ನು ಉಪ ವರ್ಗೀಕರಣ ಮಾಡಿ ಒಳಮೀಸಲಾತಿಯನ್ನು ಜಾರಿ ಮಾಡಲು ಸರ್ಕಾರವು ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ್ ದಾಸ್ ಅವರ ಅಧ್ಯಕ್ಷತೆಯಲ್ಲಿ ಏಕ ವ್ಯಕ್ತಿ ವಿಚಾರಣಾ ಆಯೋಗವನ್ನು ನೇಮಿಸಿ ಒಳಮೀಸಲಾತಿಯನ್ನು ವರ್ಗೀಕರಿಸಲು ಸೂಚಿಸಿರುವ ಹಿನ್ನೆಲೆಯಲ್ಲಿ ಉಪ ವರ್ಗೀಕರಣ ಕೈಗೊಳ್ಳಲು ಅವಶ್ಯವಿರುವ ದತ್ತಾಂಶಗಳನ್ನು ಸಂಗ್ರಹಿಸಲು ಸಮೀಕ್ಷೆ ಕೈಗೊಳ್ಳಲಾಗಿದೆ ಎಂದರು.

ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ ಮಾತನಾಡಿ, ಸದರಿ ಸಮೀಕ್ಷೆಗೆ ಸಂಪೂರ್ಣ ಸಹಕಾರ ನೀಡುವಂತೆ ಗ್ರಾಮ ಪಂಚಾಯಿತಿ ಅಭಿವೃದ್ಧಿಗೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದರು.

ಸಂಪನ್ಮೂಲ ವ್ಯಕ್ತಿ ವೆಂಕಟೇಶ್ ಮಾತನಾಡಿ, ರಾಜ್ಯದ ಪ್ರತಿಯೊಂದು ಪರಿಶಿಷ್ಟ ಜಾತಿ ಕುಟುಂಬದ ಸಮಗ್ರ ಸಮೀಕ್ಷೆಯನ್ನು ಕೈಗೊಂಡು ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಬಗ್ಗೆ ವಿಶ್ಲೇಷಣೆ ಮಾಡಿ ಒಳ ಮೀಸಲಾತಿ ವರ್ಗೀಕರಣ ಮಾಡಿ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಜವಾಬ್ದಾರಿಯನ್ನು ಆಯೋಗವು ಹೊಂದಿದೆ. ಸರ್ಕಾರವು ಈ ಉದ್ದೇಶಕ್ಕಾಗಿ ಪರಿಶಿಷ್ಟ ಜಾತಿಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಸಮಾಜ ಕಲ್ಯಾಣ ಇಲಾಖೆಯ ಮೂಲಕ ಕೈಗೊಳ್ಳಲಾಗುತ್ತಿದೆ. ರಾಜ್ಯದ ಎಲ್ಲ ಪರಿಶಿಷ್ಟ ಜಾತಿಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಔದ್ಯೋಗಿಕ ಸ್ಥಿತಿಗತಿಗಳ ಕುರಿತು ಸಮೀಕ್ಷೆ ಮುಖಾಂತರ ಸಮಗ್ರ ಅಂಕಿ-ಅಂಶಗಳನ್ನು ಸಂಗ್ರಹಿಸುವುದಾಗಿರುತ್ತದೆ ಎಂದರು.

ಸಮೀಕ್ಷೆಯಲ್ಲಿ ಅನುಸರಿಸಿದ ವಿವಿಧ ಮಾನದಂಡಗಳ ಆಧಾರದ ಮೇಲೆ ಸಂಗ್ರಹಿಸಿದ ಅಂಕಿ-ಅಂಶಗಳ ಹಿನ್ನೆಲೆಯಲ್ಲಿ ಒಳ ಮೀಸಲಾತಿಯ ವರ್ಗೀಕರಣ ಮಾಡುವುದು. ಸಮೀಕ್ಷೆದಾರರು ಸರಿಯಾದ ಕೋಡ್ ಸಂಖ್ಯೆಗಳನ್ನು ಬಳಸಿ ಮಾಹಿತಿಗಳನ್ನು ಸರಿಯಾಗಿ ಭರ್ತಿ ಮಾಡಿರುವ ಬಗ್ಗೆ ದೃಢಪಡಿಸಿಕೊಳ್ಳಬೇಕು. ಪರಿಶಿಷ್ಟ ಜಾತಿಯ ಅಧಿಕೃತ ಪಟ್ಟಿಯಲ್ಲಿರುವ ಜಾತಿಗಳ ಮಾಹಿತಿ ಆಯೋಗದ ಸಮೀಕ್ಷಾ ಉದ್ದೇಶಕ್ಕೆ ಅತಿಮುಖ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ವಿವಿಧ ಜನಾಂಗೀಯ ಅಧ್ಯಯನ ವರದಿ, ವಿವಿಧ ಆಯೋಗಗಳ ವರದಿ, ಸರ್ಕಾರದ ಹಿಂದಿನ ಮೀಸಲಾತಿ ಪಟ್ಟಿ ಮತ್ತು ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕರಿಂದ ಬಂದ ಮನವಿಗಳಲ್ಲಿ ಜಾತಿವಾರು ಜನಸಂಖ್ಯೆ ನಿರ್ದಿಷ್ಟವಾಗಿ ದೊರೆಯದೆ ಇರುವುದರಿಂದ ಈ ಸಮೀಕ್ಷೆಯಲ್ಲಿ ಪರಿಶಿಷ್ಟ ಜಾತಿಯ 101 ಜಾತಿಗಳ ನಿರ್ದಿಷ್ಟ ಜನಸಂಖ್ಯೆ ಸಂಗ್ರಹಿಸುವುದು ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು

ಆದಿ ಆಂಧ್ರ, ಆದಿ ದ್ರಾವಿಡ, ಆದಿ ಕರ್ನಾಟಕ ಎಂದು ನಮೂದಿಸಿರುವ ಜಾತಿಗಳು ಮೂಲ ಜಾತಿಗಳಲ್ಲ. ಇವು ಜಾತಿಗಳ ಗುಂಪುಗಳು ಆದ್ದರಿಂದ ಈ ಜಾತಿಗಳನ್ನು ನಮೂದಿಸುವವರು ಕಡ್ಡಾಯವಾಗಿ ತಮ್ಮ ಜಾತಿ/ಮೂಲ ಜಾತಿಯನ್ನು ನಮೂದಿಸಬೇಕು. ಅವುಗಳು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ 98 ಜಾತಿಗಳಲ್ಲಿ ಯಾವುದಾದರೂ ಆಗಿರಬಹುದು ಎಂದು ತಿಳಿಸಿದರು.

ಮೇ.19 ರಿಂದ 21ರ ವರೆಗೆ ಸಮೀಕ್ಷೆ ಬ್ಲಾಕ್‌ಗಳಲ್ಲಿ ವಿಶೇಷ ಶಿಬಿರ ಕೈಗೊಂಡು ಮನೆ ಮನೆ ಭೇಟಿ ಅವಧಿಯಲ್ಲಿ ಬಿಟ್ಟು ಹೋದ ಪರಿಶಿಷ್ಟ ಜಾತಿ ಕುಟುಂಬಗಳ ಮಾಹಿತಿಯನ್ನ ಸಂಗ್ರಹಿಸಲಾಗುತ್ತದೆ ಎಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಕೆ.ಟಿ. ಶಾಂತಲ, ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಚಂದ್ರಶೇಖರ್, ಸಮುದಾಯದ ಮುಖಂಡರಾದ ಕಲಿವೀರ್, ಈರಪ್ಪ, ಶಂಕರ್‌ರಾಜ್, ಕೃಷ್ಣದಾಸ್ ಹಾಗೂ ಸಮುದಾಯದ ಪ್ರತಿನಿಧಿಗಳು ಹಾಜರಿದ್ದರು.

## ರೈತ ಸಂಘದಿಂದ ದೆಹಲಿ ಯಾತ್ರೆ ನಾಳೆಯಿಂದ



ಬೇಲೂರು: ರಾಷ್ಟ್ರೀಯ ನದಿ ಜೋಡಣೆ ಯೋಜನೆಗೆ ತ್ವರಿತಗತಿ ಚಾಲನೆ ನೀಡಬೇಕು ಎಂದು ಆಗ್ರಹಿಸಿ ಮೇ 5 ರಿಂದ ದೆಹಲಿ ರಥ ಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ರೈತ ಸಂಘದ ರಾಷ್ಟ್ರೀಯ ಸಂಚಾಲಕ ಕನಕಂಚೇನಹಳ್ಳಿ ಪ್ರಸನ್ನಕುಮಾರ್ ತಿಳಿಸಿದರು.

ಸುದ್ದಿಗೋಷ್ಟಿಯಲ್ಲಿ ಶನಿವಾರ ಮಾತನಾಡಿ, ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಸಲ್ಲಿಸಲು ನಿರ್ಧರಿಸಲಾಗಿದೆ. ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ರಾಷ್ಟ್ರೀಯ ನದಿ ಜೋಡಣೆ ಕನಸು ಕಂಡಿದ್ದರು. ಕೆಲವೇ ರಾಜ್ಯಗಳಲ್ಲಿ ಯೋಜನೆ ಅನುಷ್ಠಾನಗೊಂಡಿದೆ. ಯೋಜನೆಯಡಿ ಸೇರಿದ 400ಕ್ಕೂ ಅಧಿಕ ನದಿಗಳ ಜೋಡಣೆ ಇನ್ನೂ ಆಗಿಲ್ಲ ಎಂದರು. ರಾಷ್ಟ್ರೀಯ ನದಿ ಜೋಡಣೆ ಸಮಿತಿ ಎಲ್ಲಾ ರಾಜ್ಯದಲ್ಲಿ ಅಸ್ತಿತ್ವದಲ್ಲಿದೆ. ಆ ಹಿನ್ನಲೆಯಲ್ಲಿ ನಿಯೋಗ ತೆರಳಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು. ಮೇ 13ಕ್ಕೆ ದೆಹಲಿ ತಲುಪಿ 14 ರಂದು ರಾಷ್ಟಪತಿ ಹಾಗು ಪ್ರಧಾನಿ ಅವರನ್ನು ಭೇಟಿ ಮಾಡಲಾಗುವುದು. ದೆಹಲಿಗೆ ಸಂಚರಿಸುವ ಮಾರ್ಗದಲ್ಲಿನ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಈ ಸಂಬಂಧ ಮನವಿ ಸಲ್ಲಿಸಲು ರಾಷ್ಟ್ರೀಯ ನದಿ ಜೋಡಣೆ ಸಮಿತಿ ನಿರ್ಧರಿಸಿದೆ ಎಂದರು.

## ವಕ್ಫ್ ಮಸೂದೆ ವಿರೋಧಿಸಿ ಬೃಹತ್ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವಕ್ಫ್ ತಿದ್ದುಪಡಿ ಕಾಯ್ದೆ ಹಿಂಪಡೆಯುವಂತೆ ಆಗ್ರಹಿಸಿ ಮುಸ್ಲಿಂ ಸಂಘಟನೆಗಳ ಒಕ್ಕೂಟದಿಂದ ಶನಿವಾರ ನಗರದ ಈದ್ಗಾ ಮೈದಾನದಲ್ಲಿ ಪ್ರತಿಭಟನಾ ಸಮಾವೇಶ ನಡೆಸಲಾಯಿತು.

ಸರ್ಕಾರ ಜಾರಿಗೆ ತಂದಿರುವ ತಿದ್ದುಪಡಿ ಕಾಯ್ದೆ ಸಂವಿಧಾನಾತ್ಮಕ ಹಕ್ಕುಗಳ ವಿರುದ್ಧವಾಗಿದ್ದು, ಮುಸ್ಲಿಂ ಸಮುದಾಯದ ಧಾರ್ಮಿಕ ನಂಬಿಕೆಗಳಿಗೆ ಧಕ್ಕೆ ತರುವಂತದ್ದಾಗಿದೆ. ಈ ಕಾಯ್ದೆ ಮುಸ್ಲಿಂ ಸಮುದಾಯದ ಧಾರ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಹಕ್ಕುಗಳ ಮೇಲೆ ಆಕ್ರಮಣವಾಗಿದೆ ಎಂದು ಪ್ರತಿಭಟನಾಕಾರರು ಹೇಳಿದರು.

ಕೇಂದ್ರ ಸರ್ಕಾರ ಇತ್ತೀಚೆಗೆ ವಿಶೇಷ ಅಧಿವೇಶನದ ಮೂಲಕ ಈ ತಿದ್ದುಪಡಿ ಕಾಯ್ದೆಯನ್ನು ಯಾವುದೇ ಮುಸ್ಲಿಂ ಮುಖಂಡರ ಸಲಹೆ ಅಥವಾ ಬೇಡಿಕೆಯಿಲ್ಲದೆ ಅಂಗೀಕರಿಸಿದೆ ಎಂದು ಆರೋಪಿಸಿದರು.

ಧಾರ್ಮಿಕ ನಂಬಿಕೆಗಳಿಗೆ ವಿರುದ್ಧವಾಗುವ ಯಾವುದೇ ವಿಧಿಯನ್ನು ಜಾರಿ ಮಾಡಬಾರದು. ಮುಸ್ಲಿಂರ ಮೇಲೆ ನಡೆಯುತ್ತಿರುವ ವೈಯಕ್ತಿಕ ದಾಳಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಮುಸ್ಲಿಂ ಸಮುದಾಯದ



ಅಭ್ಯುದಯಕ್ಕಾಗಿ ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ ಹಾಗೂ ರಾಜಕೀಯ ಯೋಜನೆಗಳನ್ನು ರೂಪಿಸಬೇಕು. ಸಾಮಾಜಿಕ ಮಾಧ್ಯಮಗಳಲ್ಲಿ ಮುಸ್ಲಿಂರ ವಿರುದ್ಧ ಅವಹೇಳನಕಾರಿ ವಿಷಯ ಹರಡುವವರ ವಿರುದ್ಧ ಕಠಿಣ ಕಾನೂನು ರೂಪಿಸಬೇಕು ಎಂದು ಒತ್ತಾಯಿಸಿದರು. ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯಾನಕ ಹತ್ಯಾಕಾಂಡವನ್ನು ಖಂಡಿಸಿ ದಾಳಿಯಲ್ಲಿ ಮೃತಪಟ್ಟವರ ಆತಕ್ಕೆ ಶಾಂತಿ ಕೋರಲಾಯಿತು.

ಸಮಾಜಿಕ ಚಿಂತಕ ರಾವಚಿಂತನ್, ಜನಪರ ಸಂಘಟನೆಗಳ ಮುಖಂಡ ಧರ್ಮೇಶ್, ದಲಿತ ಮುಖಂಡ ಹೆಚ್.ಕೆ. ಸಂದೇಶ್, ಮರಿ ಜೋಸೆಫ್, ಧಾರ್ಮಿಕ ಮುಖಂಡರಾದ ಹಾಫಿಜ್ ಫರುರ್ ಅಹಮದ್, ಮೌಲಾನಾ ವಸೀಮ್, ಮೌಲಾನಾ ಅಜ್ಹರ್ ಉಲ್ಲಾ ಖಿಸ್ವಿ, ಮುಫ್ತಿ ಜುಬೇರ್, ಮೌಲಾನಾ ನಸೀರ್ ಹುಸೇನ್ ರಜ್ವಿ, ಮೌಲಾನಾ ಅನ್ವಾರ್ ಅಸಅದಿ, ಅಬ್ದುಲ್ ಹಾನನ್, ಮುಫ್ತಿ ನಸೀಮುದ್ದೀನ್ ಸಾಬ್, ಮುಬಶಿರ್ ಅಹಮದ್ ಮತ್ತು ಇತರರು ಉಪಸ್ಥಿತರಿದ್ದರು.

## ಭ್ರಷ್ಟಾಚಾರ ಕಂಡರೂ ಅಧಿಕಾರಿಗಳ ಜಾಣ ಮೌನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಚನ್ನರಾಯಪಟ್ಟಣ ತಾಲ್ಲೂಕು ಕಾರೆಕೆರೆ ಗ್ರಾಮದಲ್ಲಿ ನಡೆಯುತ್ತಿರುವ ನರೇಗಾ ಕಾಮಗಾರಿಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದರೂ ಅಧಿಕಾರಿಗಳು ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಗ್ರಾಮಸ್ಥ ಸೋಮಶೇಖರ್ ಆರೋಪಿಸಿದರು.

ಸುದ್ದಿಗೋಷ್ಟಿಯಲ್ಲಿ ಶನಿವಾರ ಮಾತನಾಡಿ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಎಂಜಿನಿಯರ್ ಹಾಗೂ ಗುತ್ತಿಗೆದಾರ ಅಕ್ರಮದಲ್ಲಿ ಭಾಗಿಯಾಗಿದ್ದಾರೆ. ಗುತ್ತಿಗೆದಾರ ಕುಮಾರಸ್ವಾಮಿ ಎಂಬಾತ ಮಾಡಿದ ಕಾಮಗಾರಿಯನ್ನೇ ಮತ್ತೊಮ್ಮೆ ಮಾಡಿ ಬಿಲ್ ಪಡೆದಿದ್ದಾರೆ.

ಅವರ ಮಗ ಮಂಜುನಾಥ್ ಸಹ ಸರ್ಕಾರದ ಹಣವನ್ನು ಕೊಳ್ಳೆ ಹೊಡೆಯುತ್ತಿದ್ದಾರೆ ಎಂದರು.



ಕೋವಿಡ್ ಸಮಯದಲ್ಲಿ ಮೃತಪಟ್ಟ ರಂಗೇಗೌಡ ಎಂಬ ವ್ಯಕ್ತಿಯನ್ನು ಕೂಲಿಗಾರ ಎಂದು ಪರಿಗಣಿಸಿ ಆತನ ಹೆಸರಿನಲ್ಲಿ ವೇತನ ಪಡೆದಿದ್ದಾರೆ. ಗ್ರಾಮದಲ್ಲಿ ನಡೆದ ಎಲ್ಲಾ ಕಾಮಗಾರಿ ಜೆಸಿಬಿ ಮತ್ತು ಇತರ ಯಂತ್ರಗಳಿಂದ ನಡೆದಿದೆ. ಆದರೆ ಬಿಲ್ ಮಾತ್ರ ಸ್ಥಳೀಯರ ಹೆಸರಿನಲ್ಲಿ ಆಗಿದೆ ಎಂದು ದಾಖಲೆಗಳ ಪ್ರದರ್ಶಿಸಿದರು.

ಈ ಸಂಬಂಧ ಲೋಕಾಯುಕ್ತ ಸೇರಿ ಅನೇಕರಿಗೆ ದೂರು ನೀಡಿದ್ದರೂ ಪ್ರಯೋಜನವಾಗಿಲ್ಲ. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ವಿಷಯ ತಿಳಿಸಿದರೂ ಪರಿಶೀಲಿಸುತ್ತೇವೆ ಎಂದಿದ್ದಾರೆ ಹೊರತು ಯಾವ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು.

ಸೋಮಶೇಖರ್ ಅವರ ಪತ್ನಿ ರಜನಿ ಮಾತನಾಡಿ, ಅಕ್ರಮದ ವಿರುದ್ಧ ನಾನು ದನಿ ಎತ್ತಿದ್ದಕ್ಕೆ ದೇವಾಲಯಗಳಿಗೆ ನಮ್ಮನ್ನು ಸೇರಿಸುತ್ತಿಲ್ಲ. ದೇವರಿಗೆ ಬಳೆ, ಮಡಿಲಕ್ಕಿ ಕೊಡದಂತೆ ಮಾಡಿದ್ದಾರೆ ಎಂದು ಆರೋಪಿಸಿದರು.

## ವಯೋವೃದ್ಧರಿಗಾಗಿ ಕೇಂದ್ರದಿಂದ ಹಲವು ಯೋಜನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ವಯೋವೃದ್ಧರ ಸುರಕ್ಷತೆ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರ ಹತ್ತು ಹಲವು ಯೋಜನೆ ಜಾರಿಗೊಳಿಸಿದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ತಾಲ್ಲೂಕು ಪಂಚಾಯಿತಿ ಕಚೇರಿ ಆವರಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ವಯೋಶ್ರೀ ಯೋಜನೆಯಡಿ ತಾಲ್ಲೂಕಿನ 890 ನಾಗರಿಕರಿಗೆ ಉಚಿತ ಸಲಕರಣೆ ವಿತರಣೆ ಸಮಾರಂಭದಲ್ಲಿ ಮಾತನಾಡಿದರು.

ನಾಗರಿಕರನ್ನು ಪ್ರತಿಯೊಬ್ಬರು ಗೌರವಿಸಬೇಕು. ಇತ್ತೀಚಿನ ದಿನಗಳಲ್ಲಿ ಹಿರಿಯರನ್ನು ನಿರ್ಲಕ್ಷಿಸಲಾಗುತ್ತಿದ್ದು, ಸರ್ಕಾರವು ಹಿರಿಯರ ರಕ್ಷಣೆ ಹಾಗು ಸಬಲೀಕರಣಕ್ಕಾಗಿ ಹಲವು ಯೋಜನೆ ಜಾರಿಗೊಳಿಸಿದೆ ಎಂದರು.

ನಾಗರಿಕರಿಗೆ ಅಗತ್ಯವಿರುವ ಸಲಕರಣೆಗಳ ವಿತರಣೆ ಸಂಬಂಧ ಕೇಂದ್ರ ಸರ್ಕಾರದಿಂದ ಸಮೀಕ್ಷೆ



ನಡೆಸಲಾಗಿತ್ತು. ವಯೋಸಹಜ ಅಂಗವಿಕಲತೆಯಿಂದಾಗುವ ಸಮಸ್ಯೆಗಳನ್ನು ನಿವಾರಿಸಲು ಸಲಕರಣೆಗಳು ಸಹಕಾರಿಯಾಗಲಿವೆ. ಹಿರಿಯರು ಇದರ ಸದ್ಬಳಕೆ ಮಾಡಿಕೊಳ್ಳಬೇಕು.

ಆಗ ಮಾತ್ರ ಯೋಜನೆ ಸಫಲವಾಗಲಿದೆ ಎಂದರು.

ಆರ್ಥಿಕವಾಗಿ ಸಬಲರಾಗಿರುವವರು ತಮ್ಮ ಕುಟುಂಬಕ್ಕೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಸುಲಭವಾಗಿ ಪಡೆಯುತ್ತಾರೆ. ಆದರೆ ಆರ್ಥಿಕವಾಗಿ ದುರ್ಬಲರಾದವರು ಕನಿಷ್ಟ ಸೌಲಭ್ಯ ಪಡೆಯಲು ಕಷ್ಟಪಡಬೇಕಾಗುತ್ತದೆ. ಹೀಗಾಗಿ ವಿವಿಧ ರೀತಿಯ ಸೌಲಭ್ಯ ಒದಗಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಹಲವು ಯೋಜನೆ ಅನುಷ್ಠಾನಗೊಳಿಸಿದೆ ಎಂದು ಹೇಳಿದರು.

ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ ಅಧಿಕಾರಿ ಅಭಿಷೇಕ್, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಣಾಧಿಕಾರಿ ಗಂಗಾಧರ್, ತಾಪಂ ಸಹಾಯಕ ನಿರ್ದೇಶಕ ಆದಿತ್ಯ ಹಾಗೂ ಇತರರಿದ್ದರು.

## ಗೋಮತಿ ಕಲ್ಯಾಣ ಮಂಟಪದಲ್ಲಿ ಯೋಗ ಶಿಬಿರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪತಂಜಲಿ ಯೋಗ ಪರಿವಾರದಿಂದ ನಗರದ ಗೋಮತಿ ಕಲ್ಯಾಣ ಮಂಟಪದಲ್ಲಿ ಮೇ 5 ರಿಂದ 7ರ ವರೆಗೆ ಮೂರು ದಿನಗಳ ಕಾಲ ಬೆಳಿಗ್ಗೆ 5.30 ರಿಂದ 7.30ರ ವರೆಗೆ ಉಚಿತ ಯೋಗ ಧ್ಯಾನ ಪ್ರಾಣಾಯಾಮ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಪತಂಜಲಿ ಪರಿವಾರ ಜಿಲ್ಲಾ ಸಂಯೋಜಕ ಹರಿಹರಪುರ ಶ್ರೀಧರ್ ಹೇಳಿದರು.


ಸುದ್ದಿಗೋಷ್ಟಿಯಲ್ಲಿ ಶನಿವಾರ ಮಾತನಾಡಿ, ಹರಿದ್ವಾರ ಪತಂಜಲಿ ಯೋಗ ಪೀಠದ ಮುಖ್ಯ ಕೇಂದ್ರೀಯ ಪ್ರಭಾರಿ ರಾಮ್‌ದೇವ್ ಅವರ ಶಿಷ್ಯ ಸ್ವಾಮಿ ಪರಮಾರ್ಥ ದೇವ್ ಶಿಬಿರ ನಡೆಸಿಕೊಡಲಿದ್ದಾರೆ. ಸ್ವಾಮೀಜಿಯವರ ಸತ್ಸಂಗ ಮೇ 5 ರಂದು ಸಂಜೆ 5 ಗಂಟೆಗೆ ವಿಜಯ ನಗರದ ಪತಂಜಲಿ ಯೋಗ ಭವನದಲ್ಲಿ ನಡೆಯಲಿದೆ. ಮರುದಿನ ಸಂಜೆ 5 ಗಂಟೆಗೆ ತಣ್ಣೀರುಹಳ್ಳದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಮಹಾವಿದ್ಯಾಲಯದಲ್ಲಿ ನಡೆಯಲಿದೆ ಎಂದರು.

ಅದಕ್ಕೂ ಮುನ್ನ ಮೇ 4ರ ಭಾನುವಾರ ಸಂಜೆ 4 ಗಂಟೆಗೆ ಹಾಸನಾಂಬ ಕಲಾಭವನದಿಂದ ಶೋಭಾಯಾತ್ರೆ ಹೊರಡಲಿದೆ. ಸಹ್ಯಾದ್ರಿ ವೃತ್ತ, ಸೀತಾರಾಮಾಂಜನೇಯ ದೇವಾಲಯ, ಸ್ಲೇಟರ್ಸ್ ಹಾಲ್, ಆರ್.ಸಿ. ರಸ್ತೆ, ಬಿ.ಎಂ. ರಸ್ತೆ, ಎನ್.ಆರ್. ವೃತ್ತ, ಹೇಮಾವತಿ ಪ್ರತಿಮೆ ಮಾರ್ಗವಾಗಿ ಶೋಭಾಯಾತ್ರೆ ಸಾಗಲಿದೆ ಎಂದರು.




ಪತಂಜಲಿ ಯೋಗ ಸಮಿತಿ, ಭಾರತ ಸ್ವಾಭಿಮಾನ ಟ್ರಸ್ಟ್, ಮಹಿಳಾ ಪತಂಜಲಿ ಯೋಗ ಸಮಿತಿ, ಯುವ ಭಾರತ, ಕಿಸಾನ್ ಸೇವಾ ಸಮಿತಿ, ಪತಂಜಲಿ ಸೋಶಿಯಲ್ ಮೀಡಿಯಾ ಸಹಯೋಗದಲ್ಲಿ ಶಿಬಿರ ನಡೆಯಲಿದ್ದು, ಜನರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ನಗರದಲ್ಲಿ ಒಟ್ಟು 22 ಕೇಂದ್ರಗಳಿದ್ದು, ಇನ್ನೂ ಹೆಚ್ಚಿನ ಶಿಬಿರ ಆಗಬೇಕು. ಯೋಗದಿಂದ ಆರೋಗ್ಯ ವೃದ್ಧಿಸುತ್ತದೆ. ಎಲ್ಲರೂ ಪ್ರತಿದಿನ ಅರ್ಧ ಗಂಟೆ ಯೋಗ ಮಾಡಿದರೆ ಅನೇಕ ರೀತಿಯಲ್ಲಿ ಅನುಕೂಲ ಆಗಲಿದೆ ಎಂದು ಹೇಳಿದರು. ಸುದ್ದಿಗೋಷ್ಟಿಯಲ್ಲಿ ಯೋಗ ಗುರುಗಳಾದ ಶೇಷಪ್ಪ, ಶಾರದಾ, ಸುರೇಶ್ ಇತರರಿದ್ದರು.



ಅರಸೀಕೆರೆ: ನಗರದ ತಾಲ್ಲೂಕು ಕಚೇರಿ ಆವರಣದಲ್ಲಿರುವ ಕಂದಾಯ ಭವನದ ಸಭಾಂಗಣದಲ್ಲಿ ಶ್ರೀ ಶಂಕರಾಚಾರ್ಯರ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು. ತಹಶೀಲ್ದಾರ್ ಎಂ.ಜಿ. ಸಂತೋಷ್ ಕುಮಾರ್, ಬ್ರಾಹ್ಮಣ ಸಮಾಜದ ಮುಖಂಡರಾದ ಹಿರಿಯಣ್ಣಯ್ಯ, ಎನ್.ಡಿ. ಪ್ರಸಾದ್, ಮಂಜುನಾಥ್, ರವಿಕುಮಾರ್, ರಾಮಚಂದ್ರ, ಸೀತಾ ಮಹಿಳಾ ಸಂಘದ ಅಧ್ಯಕ್ಷೆ ಪ್ರೇಮಾ, ಹೊಳಲ್ಕೆರೆ ಸತೀಶ್ ಹಾಗೂ ಇತರರಿದ್ದರು.

## ರಾಧಾಕೃಷ್ಣ ಶಾಲೆಯ ದಿಶಾಗೆ 621 ಅಂಕ

ಚನ್ನರಾಯಪಟ್ಟಣ: ತಾಲ್ಲೂಕಿನ ರಾಧಾಕೃಷ್ಣ ವಿದ್ಯಾ ಶಾಲೆಯ ವಿದ್ಯಾರ್ಥಿನಿ ಕೆ. ದಿಶಾ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 621 ಅಂಕ ಗಳಿಸಿ ರಾಜ್ಯಕ್ಕೆ 5ನೇ ಸ್ಥಾನ ಪಡೆದಿದ್ದಾರೆ.



ಕನ್ನಡ 125, ಇಂಗ್ಲಿಷ್ 100, ಹಿಂದಿ 100, ಗಣಿತ 99, ವಿಜ್ಞಾನ 98, ಸಮಾಜ ವಿಜ್ಞಾನದಲ್ಲಿ 99 ಅಂಕ ಪಡೆದಿದ್ದಾರೆ.

## ತೀವ್ರ ಉಪಟಳ ನೀಡುತ್ತಿದ್ದ ಪುಂಡಾನೆ ಸೆರೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ರಸ್ತೆಯಲ್ಲಿ ಸಂಚರಿಸುತ್ತಿದ್ದ ಸಾರ್ವಜನಿಕರಿಗೆ ಕಿರಿಕಿರಿ, ಬೆಳೆ ನಾಶ ಹಾಗೂ ಆಸ್ತಿ ನಷ್ಟ ಉಂಟು ಮಾಡುತ್ತಿದ್ದ ಸುಮಾರು 30 ರಿಂದ 35 ವರ್ಷದ ಗಂಡಾನೆಯನ್ನು ತಾಲ್ಲೂಕಿನ ವಾಟೆಪುರ ಗ್ರಾಮದ ಪಾರ್ವತಮ್ಮ ಬೆಟ್ಟದ ಸಮೀಪ ಶನಿವಾರ ಸೆರೆ ಹಿಡಿಯಲಾಯಿತು.

ಕಳೆದ ಗುರುವಾರ ಸಕಲೇಶಪುರ ತಾಲ್ಲೂಕು ಹಲಸುಲಿಗೆ ಬಳಿಯ ಮಾಗಡಿ ಎಸ್ಟೇಟ್‌ನಲ್ಲಿ 20 ವರ್ಷದ ಪುಂಡಾನೆಯನ್ನು ಸೆರೆ ಹಿಡಿದು ಸ್ಥಳಾಂತರ ಮಾಡಲಾಗಿತ್ತು. ಶನಿವಾರ ಬೆಳಿಗ್ಗೆ ಪುಂಡಾನೆ ಇರುವ ಸ್ಥಳವನ್ನು ಇಟಿಎಫ್ ಸಿಬ್ಬಂದಿ ಪತ್ತೆ ಮಾಡಿದ್ದರು. ಬಳಿಕ ಪಾರ್ವತಮ್ಮನ ಬೆಟ್ಟದ ಬಳಿ ನಿಂತಿದ್ದ



ಅಡಕ-ಬಡಕ ಹೆಸರಿನ ಕಾಡಾನೆಗೆ ವೈದ್ಯರು ಅರವಳಿಕೆ ಚುಚ್ಚುಮದ್ದು ನೀಡಿದರು.

ಇಂಜೆಕ್ಷನ್ ನೀಡುತ್ತಿದ್ದಂತೆಯೇ ದೈತ್ಯಾಕಾರದ ಕಾಡಾನೆ ಸ್ವಲ್ಪ ದೂರ ಓಡಿ ಪ್ರಜ್ಞೆ ತಪ್ಪಿ ಬಿದ್ದಿತು.

ಕೂಡಲೇ ಸ್ಥಳಕ್ಕೆ ದೌಡಾಯಿಸಿದ ಅರಣ್ಯ ಇಲಾಖೆ ಸಿಬ್ಬಂದಿ ನೀರು ಹಾಕಿ ಆರೈಕೆ ಮಾಡಿದರು. ನಂತರ ನೆಲಕ್ಕುರುಳಿದ್ದ ಕಾಡಾನೆ ಕಾಲಿಗೆ ಹಗ್ಗಕಟ್ಟಿದರು. ತರುವಾಯ ವೈದ್ಯರಾದ ಮುಜೀಬ್ ಮತ್ತು ವಾಸಿಂ ರಿವರ್ಸಲ್ ಇಂಜೆಕ್ಷನ್ ನೀಡಿದರು.

ಇದಾದ ಕೆಲವೇ ಹೊತ್ತಿನಲ್ಲಿ ಎಚ್ಚರಗೊಂಡ ಅಡಕ-ಬಡಕ ಆನೆ ಘೀಳಿಟ್ಟು ಅಬ್ಬರಿಸತೊಡಗಿತು. ಕಟ್ಟಿದ್ದ ಹಗ್ಗವನ್ನು ಸೆಣಸಾಡಿ ಸಾಕಾನೆಗಳನ್ನು ಅಕ್ಷರಶಃ ಹೈರಾಣಗಿಸಿತು. ಕಾಡಾನೆಯನ್ನು ಅರಣ್ಯ ಪ್ರದೇಶದಿಂದ ಬಯಲು ಪ್ರದೇಶಕ್ಕೆ ಎಳೆದು ತರಲು ಸಾಕಾನೆಗಳು ಹರಸಾಹಸ ಪಟ್ಟವು.

ಕಾರ್ಯಾಚರಣೆಯಲ್ಲಿ ಸಾಕಾನೆಗಳಾದ ಕಂಜನ್, ಕರ್ನಾಟಕ ಭೀಮ, ಮಹೇಂದ್ರ, ಧನಂಜಯ, ಏಕಲವ್ಯ ಹಾಗೂ ಸುಗ್ರೀವ ಆನೆಗಳು ಭಾಗಿಯಾಗಿದ್ದವು. ಡಿಎಫ್‌ಓ ಸೌರಭ್‌ಕುಮಾರ್, ಆರ್‌ಎಫ್‌ಓ ಹೇಮಂತ್ ಅವರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು. ಪಾರ್ವತಮ್ಮನ ಬೆಟ್ಟದ ವ್ಯಾಪ್ತಿಯಿಂದ ಸೆರೆ ಸಿಕ್ಕ ಪುಂಡಾನೆಯನ್ನು ಹೊರಗಡೆ ಎಳೆದು ತಂದು ಲಾರಿಯ ಮೂಲಕ ಬೇರೆಡೆಗೆ ಸ್ಥಳಾಂತರ ಮಾಡಲಾಯಿತು. ಈ ವೇಳೆ ಲಾರಿ ಹತ್ತಲೂ ಸಹ ಪುಂಡಾನೆ ಪ್ರತಿರೋಧ ಒಡ್ಡಿತು. ಆದರೆ ಪಳಗಿದ ಆನೆಗಳು ಪುಂಡಾನೆ ಹೆಚ್ಚು ಹೆಚ್ಚು ಕೊಸರಾಡಲು ಬಿಡಲಿಲ್ಲ.

ಈ ವೇಳೆ ಲಾರಿ ಚಾಲಕ ರೆಹಮತ್ ಅವರು ಪುಂಡಾನೆಯನ್ನು ಕ್ರೇನ್ ಮೂಲಕ ಲಾರಿಗೆ ಹತ್ತಿಸಲು ಬೆಲ್ಟ್ ನೀಡಲು ತೆರಳುತ್ತಿದ್ದಾಗ ಅವರ ಮೇಲೆ ದಾಳಿಗೆ ಮುಂದಾಯಿತು. ಸಾಕಾನೆಗಳು ಪಕ್ಕದಲ್ಲೇ ಇದ್ದರೂ ಆನೆಯ ಆರ್ಭಟ ಒಂದು ಕ್ಷಣ ಅವಕ್ಕಾಗಿಸಿತು.

ಏ.25 ರಂದು ಸಕಲೇಶಪುರ ತಾಲ್ಲೂಕು ಬೈಕೆರೆ ಗ್ರಾಮದ ಷಣ್ಮುಖ ಅವರನ್ನು ಪುಂಡಾನೆ ಬಲಿ ಪಡೆದ ನಂತರ ಶುರುವಾಗಿರುವ ಆನೆ ಸೆರೆ ಕಾರ್ಯಾಚರಣೆಯಲ್ಲಿ ಈವರೆಗೆ ಎರಡು ಆನೆಗಳನ್ನು ಸೆರೆ ಹಿಡಿದು ಸ್ಥಳಾಂತರ ಮಾಡಲಾಗಿದೆ.

## ಹೊಳೆನರಸೀಪುರ : ದೇವಾಯಲಯ ಹುಂಡಿ ಕಳವು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ತಾಲ್ಲೂಕಿನ ಹಳ್ಳಿಮೈಸೂರು ಹೋಬಳಿ ಸೋಮನಹಳ್ಳಿ ಕೊಪ್ಪಲು ಹಾಗೂ ಬಡಕ್ಯಾತನಹಳ್ಳಿ ಗ್ರಾಮ ವ್ಯಾಪ್ತಿಯ ಎರಡು ದೇವಾಲಯಗಳಲ್ಲಿ ಶುಕ್ರವಾರ ರಾತ್ರಿ ಕಳವು ನಡೆದಿದೆ.

ಹುಂಡಿ ಒಡೆದು ನಗನಾಣ್ಯ ದೋಚಿರುವ ಕಳ್ಳರು ದೇವರ ಮೂರ್ತಿಗೆ ಅಲಂಕರಿಸಿದ್ದ ಚಿನ್ನದ ಮಾಂಗಲ್ಯ ಸರಗಳನ್ನು ದೋಚಿದ್ದಾರೆ. ಶ್ರೀ ಉಲ್ಲೇಕರೆಯಮ್ಮ ಮತ್ತು ಶ್ರೀ ಬೋರಪ್ಪನ ಗುಡಿಯಲ್ಲಿ ಕಳ್ಳತನ ಮಾಡಲಾಗಿದೆ. ಮಾಂಗಲ್ಯದ ಚಿನ್ನದ ಸರ, ಗುಂಡು ಹಾಗೂ ದೀಪದ ಕಂಬಗಳು ಹೊತ್ತೊಯ್ದಿದ್ದಾರೆ. ಎರಡೂ ದೇವಾಲಯಗಳ ಹುಂಡಿಯನ್ನು ತೆಗೆದುಕೊಂಡು ಹೋಗಿದ್ದು ನಿರ್ಜನ ಪ್ರದೇಶದಲ್ಲಿ ಒಡೆದು ಒಳಗಿದ್ದ ಕಾಣಿಕೆ ಹಣ ತೆಗೆದುಕೊಂಡು ಖಾಲಿ ಹುಂಡಿ ಬಿಸಾಡಲಾಗಿದೆ.

ಹಳ್ಳಿಮೈಸೂರು ಪಿಎಸ್‌ಐ ಸಲ್ಮಾನ್ ಖಾನ್ ಹಾಗೂ ಬೆರಳಚ್ಚು ತಜ್ಞರು ಪರಿಶೀಲನೆ ನಡೆಸಿದರು. ಅಪರಿಚಿತನ ಪರ್ಸ್ ದೇವಾಲಯದ ಆವರಣದಲ್ಲಿ ಪತ್ತೆಯಾಗಿದ್ದು ಅದರ ಜಾಡು ಹಿಡಿದು ಪೊಲೀಸರು ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದಾರೆ. ಹಳ್ಳಿಮೈಸೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕ್ರೀಡಾಂಗಣವಿಲ್ಲದೆ ಕಮರುತ್ತಿದೆ ಕ್ರೀಡಾಪಟುಗಳ ಕನಸು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಸೀಕೆರೆ: ಭಾರತೀಯ ಕ್ರಿಕೆಟ್ ರಂಗದ ದಂತಕತೆ ಜಾವಗಲ್ ಶ್ರೀನಾಥ್, ಪ್ರತಿಭಾವಂತ ಆಟಗಾರ ಡೇವಿಡ್ ಜಾನ್ಸನ್ ಅವರಂತಹ ಹೆಸರಾಂತ ಕ್ರಿಕೆಟ್ ಆಟಗಾರರನ್ನು ದೇಶಕ್ಕೆ ಕೊಡುಗೆ ನೀಡಿದ ಅರಸೀಕೆರೆ ತಾಲ್ಲೂಕಿನಲ್ಲಿ ಕ್ರೀಡಾಪಟುಗಳಿಗೆ ನೆರವಾಗಲು ಸುಸಜ್ಜಿತ ಕ್ರೀಡಾಂಗಣ ಹಾಗೂ ಪ್ರೋತ್ಸಾಹವಿಲ್ಲದೆ ತಾಲ್ಲೂಕಿನ ಕೀರ್ತಿ ಹೆಚ್ಚಿಸಬೇಕೆಂದ ಅನೇಕ ಕ್ರೀಡಾಪಟುಗಳು ನಿರಾಸೆ ಅನುಭವಿಸುವಂತಾಗಿದೆ.

ಪ್ರತಿಭಾವಂತ ಉತ್ಸಾಹಿ ಯುವ ಕ್ರಿಕೆಟಿಗರಿಗೆ ತಾಲ್ಲೂಕಿನಲ್ಲಿ ಕೊರತೆ ಇಲ್ಲ. ಇದಕ್ಕೆ ಪೋಷಕರ ಸಹಕಾರ ಕೂಡ ದೊರೆಯುತ್ತಿದೆ. ಆದರೆ ಇಂಥ ಯುವ ಕ್ರಿಕೆಟ್ ಆಟಗಾರರು ಜಿಲ್ಲೆ ಮತ್ತು ವಿಭಾಗ ಮಟ್ಟದ ಕ್ರೀಡಾಕೂಟಗಳಲ್ಲಿ ಗಮನ ಅರ್ಹ ಸಾಧನೆ ಮಾಡುತ್ತಿದ್ದರು. ಮುಂದಿನ ಹಂತ ಪ್ರವೇಶಿಸಲು ಸೂಕ್ತ ಮಾರ್ಗದರ್ಶನವಾಗಲಿ ಆಗಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ ಕೊಡುವಲ್ಲಿ ಯುವಜನ ಮತ್ತು ಕ್ರೀಡಾ ಇಲಾಖೆ ವಿಫಲವಾಗಿರುವುದು ಬೇಸರದ ಸಂಗತಿ.

ಸ್ಥಳೀಯ ಎಫ್‌ಯುಸಿಸಿ ಕ್ರಿಕೆಟ್ ಕ್ಲಬ್ ಸಕ್ರಿಯವಾಗಿದೆ. ಈ ಕ್ಲಬ್ ಆಶ್ರಯದಲ್ಲಿ ಹತ್ತಾರು ಯುವ ಆಟಗಾರರು ನಿತ್ಯ ಅಭ್ಯಾಸ ಮಾಡುವುದಲ್ಲದೆ ಕರ್ನಾಟಕ ಕ್ರಿಕೆಟ್ ಬೋರ್ಡ್ ಆಯೋಜಿಸುವ ಜಿಲ್ಲಾ ಹಾಗೂ ವಿಭಾಗ ಮಟ್ಟದ ಕ್ರೀಡಾಕೂಟದಲ್ಲಿ ಪಾಲ್ಗೊಂಡು ಗಮನಾರ್ಹ ಸಾಧನೆ ತೋರಿದರು. ರಾಜ್ಯಮಟ್ಟದಲ್ಲಿ ಎದುರಾಗುವ ತಂಡಗಳ ವಿರುದ್ಧ ಇವರ ಆಟ ಮಂಕೆನಿಸುತ್ತದೆ. ಇದಕ್ಕೆ ಕಾರಣ ಬೆಂಗಳೂರು ಮೈಸೂರಿನಂತ ಮಹಾನಗರಗಳಲ್ಲಿ ದೊರೆಯುವ ಉತ್ತೇಜನ ಮತ್ತು ಅದಕ್ಕೆ ಪೂರಕ ಸೌಕರ್ಯಗಳ ಮುಂದೆ ಕ್ರೀಡಾಂಗಣವಿರಲಿ ಕನಿಷ್ಠ ನಿತ್ಯ ಅಭ್ಯಾಸಕ್ಕಾದರೂ ಪಿಚ್ ಸೌಲಭ್ಯವು ಇಲ್ಲದೆ ಆಡುತ್ತಿರುವ ಗ್ರಾಮೀಣ ಭಾಗದ ಕ್ರಿಕೆಟ್ ಆಟಗಾರರ ಪ್ರತಿಭೆ ಕಮರಿ ಹೋಗುತ್ತಿದ್ದು ನೋವಿನ ಸಂಗತಿಯಾಗಿದೆ.

ತಾಲ್ಲೂಕಿನ ಹಿರಿಯ ಕ್ರಿಕೆಟ್ ಆಟಗಾರ ಹಾಗೂ ರಾಜ್ಯ ಕ್ರಿಕೆಟ್ ಬೋರ್ಡ್ ನ ಶಿವಮೊಗ್ಗ ವಲಯದ ಖಜಾಂಚಿ ತೋಂಟೇಶ್ ಬಾಬು ಪತ್ರಿಕೆಯೊಂದಿಗೆ ಮಾತನಾಡಿ, ಬಿಸಿಸಿಐ ಮತ್ತು ರಾಜ್ಯ ಕ್ರಿಕೆಟ್ ಬೋರ್ಡ್‌ನ ಸಂಸ್ಥೆಗಳು ರಾಜ್ಯ ಮತ್ತು ದೇಶದಲ್ಲಿ ಕ್ರಿಕೆಟ್ ಬೆಳವಣಿಗೆಗೆ ನೀಡುತ್ತಿರುವ ಕೊಡುಗೆ ದೊಡ್ಡ ಪ್ರಮಾಣದಲ್ಲಿದೆ. ನಗರ ಪ್ರದೇಶದಂತೆ ಗ್ರಾಮೀಣ ಭಾಗದ ಪ್ರತಿಭಾವಂತ ಕ್ರಿಕೆಟ್ ಆಟಗಾರರನ್ನು ಗುರುತಿಸಲು ತಾಲ್ಲೂಕು, ಜಿಲ್ಲೆ, ವಿಭಾಗ ಹೀಗೆ ಹಲವು ಮಾರ್ಗಗಳ ಮೂಲಕ ಯುವ ಕ್ರಿಕೆಟ್ ಆಟಗಾರರನ್ನು ಗುರುತಿಸುವ ಕೆಲಸ ಮಾಡುತ್ತದೆ. ಆದರೆ ಸಂಬಂಧಪಟ್ಟ ಇಲಾಖೆ ಮತ್ತು ಸ್ಥಳೀಯ ಆಡಳಿತ ಈ ನಿಟ್ಟಿನಲ್ಲಿ ಗಂಭೀರ ಚಿಂತನೆ ನಡೆಸಬೇಕಿದೆ. ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಕ್ರಿಕೆಟ್‌ಗೆ ಅರಸೀಕೆರೆ ಕೊಡುಗೆ ಅಪಾರವಾಗಿದೆ.

ಇಂತಹ ತಾಲ್ಲೂಕಿನಲ್ಲಿ ಸುಸಜ್ಜಿತವಾದ ಕ್ರೀಡಾಂಗಣ ನಿರ್ಮಿಸಲು ಹಲವಾರು ಬಾರಿ ಪ್ರಯತ್ನ ಮಾಡಿದರು ಕಾರ್ಯಗತವಾಗಿಲ್ಲ. ಈ ನಿಟ್ಟಿನಲ್ಲಿ ಸ್ಥಳೀಯ ಶಾಸಕ ಕೆ.ಎಂ. ಶಿವಲಿಂಗೇಗೌಡ, ತಾಲ್ಲೂಕು ಆಡಳಿತ ನಗರದ ಹೊರವಲಯದಲ್ಲಿ 13 ಎಕರೆ ಜಾಗವನ್ನು ನೀಡಿದರೆ ಕರ್ನಾಟಕ ಕ್ರಿಕೆಟ್ ಬೋರ್ಡ್ ವತಿಯಿಂದ ಹೈಟೆಕ್ ಕ್ರೀಡಾಂಗಣವನ್ನು ನಿರ್ಮಿಸಿಕೊಡಲಾಗುವುದು ಎಂದರು.

ತಾಲ್ಲೂಕು ಜಿಲ್ಲೆ ಹಾಗೂ ವಿಭಾಗ ಮಟ್ಟದ ಟೂರ್ನಮೆಂಟ್‌ಗಳಲ್ಲಿ ಹಲವು ತಂಡಗಳನ್ನು ನಮ್ಮ ತಂಡ ಸೋಲಿಸಿದೆ ನಮಗೆ ನಿತ್ಯ ಅಭ್ಯಾಸಕ್ಕೆ ಕನಿಷ್ಠ 2 ರಿಂದ 3 ನೆಟ್‌ಗಳು ಒಂದು ಟರ್ಫ್ ಪಿಚ್ ವ್ಯವಸ್ಥೆನಾದರು ಮಾಡಿಕೊಡಬೇಕು ಎನ್ನುತ್ತಾನೆ ಯುವ ಆಲ್ರೌಂಡರ್ ಹರ್ಷ.

# ಗಮನ ಸೆಳೆದ ಜನಪದ ಅಡುಗೆ-ಉಡುಗೆ ಕಾರ್ಯಕ್ರಮ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಳೇಬೀಡು: ಇಲ್ಲಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಈಚೆಗೆ ಜನಪದ ಅಡುಗೆ, ಉಡುಗೆ ಹಾಗೂ ಕ್ರೀಡಾ ಕಾರ್ಯಕ್ರಮ ನಡೆಯಿತು.

ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಪಂಚೆ ಶರ್ಟು ಧರಿಸಿದ್ದರು. ವಿದ್ಯಾರ್ಥಿನಿಯರು ಸೀರೆ ಧರಿಸಿದ್ದರು. ವಿದ್ಯಾರ್ಥಿಗಳು ಮನೆಯಲ್ಲಿ ತಯಾರಿಸಿದ ಪ್ರಾಚೀನ ತಿಂಡಿ ತಿನಿಸುಗಳನ್ನು ತಂದು ಜೋಡಿಸಿದ್ದರು. ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಅತಿಥಿಗಳು ಖರೀದಿಸಿ ಸೇವಿಸಿ ರುಚಿಯನ್ನು ಆಸ್ವಾದಿಸಿದರು. ರಾಗಿ ಗಿಣ್ಣು, ರವೆ ಉಂಡೆ, ಎಳ್ಳುಂಡೆ, ಶಂಕರ ಪೌಳಿ, ಶಾವಿಗೆ, ರಾಗಿ, ಜೋಳದ ರೊಟ್ಟಿಯನ್ನು ತಿಂದು ಅತಿಥಿಗಳು ಸಂಭ್ರಮಿಸಿದರು ಎಂದು ಪ್ರಾಧ್ಯಾಪಕ ಡಾ. ಬಿ.ಕೆ. ಶ್ರೀನಿವಾಸ ಹೇಳಿದರು.



ಕೃಷಿ ಬಳಕೆಯ ಹಳೆಯ ನೇಗಿಲು, ನೋಗ, ಕುಂಟೆ, ಮಚ್ಚು ಪ್ರದರ್ಶನದಲ್ಲಿದ್ದವು. ಖಡ್ಗ, ಕಾಲು ಗೆಜ್ಜೆ, ಮಣ್ಣಿನ ಮಡಿಕೆ ಹಾಗೂ ಲೋಹದ ಹಳೇಯ ಪಾತ್ರೆಗಳನ್ನು ಜೋಡಿಸಿದ್ದರು ಎಂದು ಪ್ರಾಂಶುಪಾಲ ಜಿ.ಡಿ.ನಾರಾಯಣ ತಿಳಿಸಿದರು.

ಚಿನ್ನಿದಾಂಡು, ಗೋಲಿ, ಹಗ್ಗಜಗ್ಗಾಟ, ಗೋಣಿ ಚೀಲದ ಓಟ, ಲಗೋರಿ, ಮರಕೋತಿ ಆಟಗಳನ್ನು ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಒಟ್ಟಾಗಿ ಆಡಿ ಸಂಭ್ರಮಿಸಿದರು. ಚೌಕಾಬಾರ, ಹಳಗುಳೆ ಮಣೆ, ಕಣ್ಣಾ ಮುಚ್ಚಾಲೆ ಪೈಪೋಟಿಯಲ್ಲಿ ನಡೆಯಿತು ಎಂದು ಪ್ರಾಧ್ಯಾಪಕ ಡಾ.ಅಭಿಲಾಷ್ ತಿಳಿಸಿದರು.

ಅಲಂಕರಿಸಿದ್ದ ಜೋಡೆತ್ತು ಹಾಗೂ ತಮಟೆ ವಾದನ ಕಾರ್ಯಕ್ರಮದ ವೈಭವ ಹೆಚ್ಚಿಸಿತ್ತು.

ಜನಪದ ಅಡುಗೆ, ಉಡುಗೆ ಹಾಗೂ ಕ್ರೀಡಾ ಉತ್ಸವದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕರು ಶತಮಾನದ ಹಿಂದೆ ಇದ್ದೇವೆ ಎನ್ನುವ ಭಾವನೆಯಲ್ಲಿ ಹಳೇಯ ಕಾಲದ ಆಟ, ಊಟ, ಉಡುಗೆ ತೊಡುಗೆಯನ್ನು ಅನುಭವಿಸಿದರು.

# ಪವರ್ ಲಿಫ್ಟಿಂಗ್ ಚಾಂಪಿಯನ್ ಶಿಪ್‌ಗೆ ಸಿಂಚನಾ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲಾ ಪವರ್ ಲಿಫ್ಟಿಂಗ್ ಸಂಸ್ಥೆಯಲ್ಲಿ ತರಬೇತಿ ಪಡೆಯುತ್ತಿರುವ ನಗರದ ಕೆ.ಹೆಚ್.ಸಿಂಚನಾ ಮೇ 5 ರಿಂದ 12ರ ವರೆಗೆ ಉತ್ತರಾಖಂಡ್‌ನ ಡೆಹರಾಡೂನ್‌ನಲ್ಲಿ ನಡೆಯುವ ಏಷ್ಯನ್ ಸಬ್ ಜೂನಿಯರ್ ಪವರ್ ಲಿಫ್ಟಿಂಗ್ ಚಾಂಪಿಯನ್ ಶಿಪ್‌ಗೆ ಭಾರತ ತಂಡದ ಆಟಗಾರ್ತಿಯಾಗಿ ಆಯ್ಕೆಯಾಗಿದ್ದಾಳೆ ಎಂದು ಆಕೆಯ ತಂದೆ ಹಾಗೂ ಅಂತಾರಾಷ್ಟ್ರೀಯ ಪವರ್ ಲಿಫ್ಟರ್ ಕೆ.ಹನುಮಂತೇಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 43 ಕೆ.ಜಿ. ವಿಭಾಗದಲ್ಲಿ ಸಿಂಚನಾ ಒಬ್ಬಳೆ ಕರ್ನಾಟಕದಿಂದ ಆಯ್ಕೆಯಾಗಿದ್ದಾಳೆ. ಈಗಾಗಲೇ ಸಬ್ ಜೂನಿಯರ್ ವಿಭಾಗದಲ್ಲಿ ಐದು ಬಾರಿ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿ ಮೂರು ಬಾರಿ ಚಿನ್ನದ ಪದಕ ಗೆದ್ದಿದ್ದಾಳೆ ಎಂದು ತಿಳಿಸಿದರು.

ಸಿಂಚನಾ ಮಾತನಾಡಿ, 2023 ರಿಂದ ನಾನು ತರಬೇತಿ ಪಡೆಯುತ್ತಿದ್ದು, ನನಗೆ ತಂದೆಯೇ ಗುರು. ನನ್ನ ಈ ಸಾಧನೆಗೆ ಪೋಷಕರ ಸಹಕಾರ ತುಂಬಾ ಇದೆ. ಮುಂದಿನ ದಿನಗಳಲ್ಲಿ ವಿಶ್ವ ಚಾಂಪಿಯನ್ ಶಿಪ್‌ನಲ್ಲಿ ಭಾರತಕ್ಕೆ ಚಿನ್ನದ ಪದಕ ತಂದುಕೊಡಬೇಕು ಎಂಬ ಆಸೆ ಇದೆ. ಹಾಗೆಯೇ ನನ್ನ ತಂದೆ ಜೊತೆಯಲ್ಲಿ ಭಾಗವಹಿಸಿ ಪದಕ ಗೆಲ್ಲಬೇಕು ಎಂಬ ಮಹದಾಸೆ ಇದೆ ಎಂದು ಹೇಳಿದರು.


ಜಿಲ್ಲಾ ಪವರ್ ಲಿಫ್ಟಿಂಗ್ ಸಂಸ್ಥೆಯ ಅಧ್ಯಕ್ಷ ಕೃಷ್ಣೇಗೌಡ, ಶಿವಸ್ವಾಮಿ, ಅಶ್ವಥ್, ಶರಾವತಿ ಇದ್ದರು.

# ಶ್ರದ್ಧೆಯಿಲ್ಲದ ವಿದ್ಯೆಯಿಂದ ಯಾವುದೇ ಪ್ರಯೋಜನವಿಲ್ಲ: ಚುಂಚಶ್ರೀ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಮನುಷ್ಯನಿಗೆ ಶ್ರದ್ಧೆ ಇರದೇ ಇರುವ ಯಾವುದೇ ವಿದ್ಯೆಯಿಂದಲೂ ಜ್ಞಾನ ಬರಲು ಸಾಧ್ಯವಿಲ್ಲ. ಈ ಸಲುವಾಗಿಯೇ ದೇವಾಲಯಗಳ ನಿರ್ಮಾಣ, ಪೂಜಾ, ಧಾರ್ಮಿಕ ಕಾರ್ಯಗಳು ಅಗತ್ಯವಾಗಿ ಬೇಕಿದೆ ಎಂದು ಆದಿಚುಂಚನಗಿರಿ ಪೀಠಾಧ್ಯಕ್ಷ ಡಾ. ಶ್ರೀ ನಿರ್ಮಲನಂದನಾಥ ಸ್ವಾಮೀಜಿ ತಿಳಿಸಿದರು.

ತಾಲ್ಲೂಕಿನ ರಾಜರಾಂಪುರ ಗ್ರಾಮದಲ್ಲಿ ನೂತನವಾಗಿ ಜೀರ್ಣೋದ್ಧಾರಗೊಳಿಸಿರುವ ಶ್ರೀದಕ್ಷಿಣಮುಖ ಉದ್ಭವಮೂರ್ತಿ ಬಸವೇಶ್ವರ ದೇವಸ್ಥಾನ ಉದ್ಘಾಟನಾ ಸಮಾರಂಭದಲ್ಲಿ ಆಶೀರ್ವಚನ ನೀಡಿದ ಅವರು, ವಿಶ್ವ ಚೈತನ್ಯ ಶಕ್ತಿಯನ್ನು ಅರ್ಥಮಾಡಿಕೊಂಡು ಗುರು ಹಿರಿಯರು ಹಾಕಿಕೊಟ್ಟಿರುವ ಆಚಾರ ವಿಚಾರಗಳನ್ನು ಮೈಗೂಡಿಸಿಕೊಂಡು ಗೌರವಿಸುವ ಕೆಲಸ ಹೆಚ್ಚೆಚ್ಚು ನಿತ್ಯವೂ ಸಾಗಬೇಕಿದೆ. ಇದರಿಂದ ಗ್ರಾಮಗಳಲ್ಲಿನ ಜನರಲ್ಲಿ ವಿಶ್ವಚೈತನ್ಯ ಶಕ್ತಿ ವಿಕಸನಗೊಂಡು ಸಾಮರಸ್ಯ ಮೂಡಲಿದೆ ಎಂದು ಹೇಳಿದರು.



ಈ ಗ್ರಾಮದಲ್ಲಿನ ಪುರಾತನ ಶ್ರೀ ದಕ್ಷಿಣಮುಖ ಉದ್ಭವಮೂರ್ತಿ ಬಸವೇಶ್ವರ ದೇವಾಲಯವನ್ನು ಅತ್ಯಂತ ಸುಂದರವಾಗಿ ಜೀರ್ಣೋದ್ಧಾರ ಕಾರ್ಯ ಕೈಗೊಂಡಿದ್ದೀರಿ. ದೇವಾಲಯದ ಮೂರ್ತಿ ನಿಜವಾಗಿಯೂ ಉದ್ಭವಮೂರ್ತಿ ಎಂಬುದು ಖಾತ್ರಿಯಾಗುತ್ತದೆ. ಇಡೀ ಗ್ರಾಮಸ್ಥರು ಶ್ರದ್ಧಾ ಭಕ್ತಿಯಿಂದ ದೇವರನ್ನು ಪೂಜಿಸಿ ಶುದ್ಧ ಮನಸ್ಥಿತಿಯನ್ನು ಹೊಂದಬೇಕೆಂದರು.

ಶಾಸಕ ಎ. ಮಂಜು ಮಾತನಾಡಿ, ರಾಜರಾಂಪುರ ಮತ್ತು ಮಾಯಣ್ಣನಕೊಪ್ಪಲು ಗ್ರಾಮಸ್ಥರ ಜತೆಯಾಗಿ ಕ್ರಸರ್ ಮಾಲೀಕರಾದ ದೊಡ್ಡಬೆಮ್ಮತ್ತಿ ಸುರೇಶ್ ಅವರು ದೇವಾಲಯದ ಜೀರ್ಣೋದ್ಧಾರ ಕಾರ್ಯವನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಇಂತಹ ಕಾರ್ಯಗಳು ಅವರಿಂದ ಮತ್ತೊಷ್ಟು ನಡೆಯಲಿ. ಈ ಎರಡು ಗ್ರಾಮಗಳು ಸೇರಿದಂತೆ ಅಕ್ಕಪಕ್ಕದ ಗ್ರಾಮಗಳ ಜನರು ಯಾವುದೇ ವೈಮನಸ್ಸುಗಳನ್ನು ಇಟ್ಟುಕೊಳ್ಳದೆ ಒಂದಾಗಿ ಬಾಳಿ ಎಂದು ಕಿವಿಮಾತು ಹೇಳಿದರು.

ಈ ಭಾಗದ ಗ್ರಾಮಗಳ ಕೆರೆಕಟ್ಟೆಗಳಿಗೆ ನೀರು ತುಂಬಿಸುವ ಎರಡನೇ ಹಂತದ ಮಲ್ಲಿಪಟ್ಟಣ ಏತ ನೀರಾವರಿ ಯೋಜನೆಗೆ 77 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ. ಕೆಲಸ ಕೂಡ ಆರಂಭಗೊಳ್ಳಲಿದೆ. ರೈತರು ಸಂವೃದ್ಧಿಯಾಗಿದ್ದರೇ ದೇಶ ಸುಭಿಕ್ಷವಾಗಿರುತ್ತದೆ ಎಂದರು.

ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ, ಶ್ರೀ ಬಸವರಾಜೇಂದ್ರ ಸ್ವಾಮೀಜಿ, ಕ್ರಸರ್ ಮಾಲೀಕರಾದ ಎಂ.ಎಂ. ಸುರೇಶ್, ಗ್ರಾಮದ ಮುಖಂಡರು, ಗ್ರಾಮಸ್ಥರು ಉಪಸ್ಥಿತರಿದ್ದರು.

# ಟೈಮ್ಸ್ ಶಾಲೆಯ ಇಬ್ಬರಿಗೆ ಸಮಾನ ಅಂಕ



ಹಾಸನ: ಇಲ್ಲಿನ ವಿಜಯ ನಗರದಲ್ಲಿರುವ ಟೈಮ್ಸ್ ಶಾಲೆಯ ಇಬ್ಬರು ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತಲಾ 623 ಅಂಕ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ. ವಿದ್ಯಾರ್ಥಿಗಳಾದ ಆರ್. ಧನುಷ್ ಹಾಗೂ ವಿ.ಕೆ. ಶಾಮಿಕಾ ಸಮಾನ ಅಂಕ ಪಡೆದಿದ್ದಾರೆ. ಅತ್ಯಧಿಕ ಅಂಕಗಳ ಮೂಲಕ ವಿದ್ಯಾ ಸಂಸ್ಥೆಗೆ ಕೀರ್ತಿ ತಂದಿರುವ ವಿದ್ಯಾರ್ಥಿಗಳು ಶಾಲಾ ಆಡಳಿತ ಮಂಡಳಿ ಅಭಿನಂದಿಸಿದೆ.

# ಹೊಳಲು ಗ್ರಾಮದಲ್ಲಿ ದೇವಿರಮ್ಮ ಸುಗ್ಗಿ ಉತ್ಸವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಹೊಳಲು ಗ್ರಾಮದಲ್ಲಿ 29 ವರ್ಷಗಳಿಂದ ತೆರೆಮರೆಗೆ ಸರಿದಿದ್ದ ಆದಿಶಕ್ತಿ ದೇವಿರಮ್ಮ ಸುಗ್ಗಿ ಮಹೋತ್ಸವ ವಿದ್ಯುಕ್ತವಾಗಿ ಪ್ರಾರಂಭವಾಯಿತು.

ಪ್ರತಿ ಕುಟುಂಬದ ಮಹಿಳೆಯರು ದೇವಸ್ಥಾನದ ಮುಂಭಾಗದಲ್ಲಿರುವ ಕೊಳವೆ ಬಾವಿ ಬಳಿ ಕಳಸಗಳನ್ನು ಪೂಜಿಸಿದರು. ಮಡಿವಾಳ ವಂಶದವರು ಪಂಜಿನ ಸೇವೆ ಸಲ್ಲಿಸಿದರು. ನಂತರ ಮಹಿಳೆಯರು ಕಳಸಗಳನ್ನು ಮೆರವಣಿಗೆಯಲ್ಲಿ ದೇವಸ್ಥಾನಕ್ಕೆ ತಂದರು. ದೇವಿಗೆ ವಿಶೇಷವಾಗಿ ಶೃಂಗರಿಸಿ ಮಹಾ ಮಂಗಳಾರತಿ ನಡೆಯಿತು. ಸಂಜೆ ಅಡ್ಡೆ ದೇವರನ್ನು ಸುಗ್ಗಿ ಕಟ್ಟೆಗೆ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಿ ಎಲ್ಲರೂ ಕುಣಿದು ಕುಪ್ಪಳಿಸಿದರು.

ಸಂಜೆ ಹೊನ್ನಾರು ಮತ್ತು ಮಲ್ಲು ಸುಗ್ಗಿ ನಡೆಯಲಿದೆ. ಹೊನ್ನಾರು ಸುಗ್ಗಿ ಎಂದರೆ ಹೊಸದಾದ ಮರದ ನೇಗಿಲಿನಿಂದ ಉಳುಮೆ ಮಾಡಲಾಯಿತು. ನೇಗಿಲನ್ನು ಎಳೆಯುವ ಇಬ್ಬರು ಯುವಕರು ಉಪವಾಸವಿದ್ದು ನೊಗದ ಮೂಲಕ ನೇಗಿಲನ್ನು ಎಳೆದರು. ಇದೆ ಸಂದರ್ಭದಲ್ಲಿ ದವಸವನ್ನು ಭೂಮಿಯಲ್ಲಿ ಬಿತ್ತನೆ ಮಾಡಿದರು. ನಂತರ ತ್ರಿಕೋನಾಕಾರದ ಬಣ್ಣ ಬಳಿದ ಕಡ್ಡಿಗಳನ್ನು ಹಿಡಿದು ಮಲ್ಲು ಸುಗ್ಗಿ ಎಂದು ಸುಗ್ಗಿ ಕಟ್ಟೆಯಲ್ಲಿ ವಾದ್ಯದೊಂದಿಗೆ ಕುಣಿದು ಕುಪ್ಪಳಿಸಿದರು.



# ಸುಹಾಸ್ ಶೆಟ್ಟಿ ಹತ್ಯೆ ಪೂರ್ವ ನಿಯೋಜಿತ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಮಂಗಳೂರಿನಲ್ಲಿ ನಡೆದ ಹಿಂದು ಕಾರ್ಯಕರ್ತ ಸುಹಾಸ್ ಶೆಟ್ಟಿ ಅವರ ಬರ್ಬರ ಹತ್ಯೆ ಪೂರ್ವನಿಯೋಜಿತ ಎಂದು ಶಾಸಕ ಸಿಮೆಂಟ್ ಮಂಜು ಆರೋಪಿಸಿದರು.

ನಗರದ ಹಳೆ ಬಸ್ ನಿಲ್ದಾಣ ಮುಂಭಾಗ ಶುಕ್ರವಾರ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮಾತನಾಡಿ, ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೆ ಎಸ್‌ಡಿಪಿಐ, ಪಿಎಫ್‌ಐ ಮೇಲಿನ ಪ್ರೀತಿಯು ಸುಹಾಸ್ ಹತ್ಯೆಯಂತಹ ದುಷ್ಕೃತ್ಯ, ಹಿಂದುಗಳ ಬೆದರಿಕೆ-ಹಿಂದುಗಳ ಹತ್ಯೆಗೆ ಶಕ್ತಿ ಕೊಟ್ಟಂತಿದೆ ಎಂದು ಕಿಡಿಕಾರಿದರು.

ಕಾಶ್ಮೀರದಲ್ಲಿ ಹಿಂದುಗಳ ಮಾರಣ ಹೋಮ ಆಗಿದೆ. ಇದನ್ನು ದೇಶ-ರಾಜ್ಯದ ಜನರು ಮರೆತಿಲ್ಲ. ಇದರ ನಡುವೆ ಹಿಂದು ಕಾರ್ಯಕರ್ತನ ಬರ್ಬರ ಹತ್ಯೆ ನಡೆದಿರುವುದು ಖಂಡನೀಯ.



ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ದೇಶದ್ರೋಹಿಗಳು, ಕೊಲೆಗಡುಕರಿಗೆ ಏನು ಮಾಡಿದರೂ ನಡೆಯುತ್ತದೆ ಎಂಬ ಆತ್ಮವಿಶ್ವಾಸ ಹೆಚ್ಚಾಗಿದೆ. ಇದರ ಪರಿಣಾಮವಾಗಿ ಪದೇ ಪದೇ ಇಂತಹ ಕೃತ್ಯ ನಡೆಯುತ್ತಿದೆ ಎಂದರು.

ಜಿಲ್ಲಾ ಬಿಜೆಪಿ ಮುಖಂಡ ರಾಜ್ ಕುಮಾರ್, ತಾಲ್ಲೂಕು ಬಿಜೆಪಿ ಪ್ರಧಾನ ಕಾರ್ಯದರ್ಶಿ ಅಗ್ನಿ ಸೋಮಶೇಖರ್, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ನಿಖಿಲ್ ಹಲಸುಲಿಗೆ ಹಾಗೂ ಇತರರಿದ್ದರು.

# ಹೊಯ್ಸಳರ ನೆನಪುಗಳು-ಸರಣಿ 3



ಹೊಯ್ಸಳ ಕಾಲದ ಅಮೃತಪುರ, ಹಾರನಹಳ್ಳಿ, ಗೋವಿಂದನಹಳ್ಳಿ, ನುಗ್ಗೇಹಳ್ಳಿ, ಜಾವಗಲ್, ಸೋಮನಾಥಪುರ ದೇವಾಲಯಗಳಲ್ಲಿ ನೂರಕ್ಕೂ ಹೆಚ್ಚು ಅತ್ಯದ್ಭುತ ಶಿಲ್ಪಕಲಾ ಕೃತಿಗಳನ್ನು ನೀಡಿರುವ ಮಹಾಶಿಲ್ಪಿ ಮಲ್ಲಿ ತಮ್ಮ ಕೈ ಚಳಕದಿಂದ ಮೂಡಿರುವ ಕಲಾ ಕೃತಿ ಶ್ರೀ ಜನಾರ್ಧನ (ಅಭಯಹಸ್ತ, ಚಕ್ರ, ಶಂಖ, ಗಧಾ, ಕೆಳಭಾಗ ಅಕ್ಕಪಕ್ಕದಲ್ಲಿ ದೇವಿಯರು) ಹಾಗೂ ಮೂಡಿಸಿರುವ ಶಿಲ್ಪಿಯ ಹೆಸರು/ ಹಸ್ತಾಕ್ಷರ ಮಲ್ಲಿ ತಂಮ ಶ್ರೀ ಕೇಶವ ದೇವಾಲಯ ಸೋಮನಾಥಪುರ.

**- ಡಾ. ಎನ್. ರಮೇಶ್, ಹಾಸನ**

# ಹೆಚ್.ಎಂ. ವರ್ಷಿತಗೆ 623 ಅಂಕ



ಅರಕಲಗೂಡು: ತಾಲ್ಲೂಕಿನ ಬರಗೂರು ಮುರಾರ್ಜಿ ವಸತಿ ಶಾಲೆಯ ವಿದ್ಯಾರ್ಥಿನಿ ಹೆಚ್.ಎಂ. ವರ್ಷಿತ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 623ಅಂಕ ಪಡೆಯುವ ಮೂಲಕ ರಾಜ್ಯಕ್ಕೆ ಮೂರನೇ ರ್‍ಯಾಂಕ್ ಹಾಗೂ ತಾಲ್ಲೂಕಿಗೆ ಪ್ರಥಮ ಸ್ಥಾನ ಪಡೆದು ಕೀರ್ತಿ ತಂದಿದ್ದಾಳೆ.

ತಾಲ್ಲೂಕಿನ ಹಂಪಾಪುರ ಗ್ರಾಮದ ರೈತ ಮಹೇಶ್ ಅವರ ಮಗಳಾಗಿರುವ ಈಕೆಯ ಸಾಧನೆಯನ್ನು ಕಂಡು ಇಡೀ ಗ್ರಾಮವೇ ಸಂಭ್ರಮಿಸಿತು. ಕುಟುಂಬದವರು ಕೂಡ ಸಾಧನೆ ಮಾಡಿದ ವರ್ಷಿತಗೆ ಶಾಲುಹೊದಿಸಿ ಸಿಹಿ ತಿನಿಸಿ ಖುಷಿಪಟ್ಟರು.

ಗ್ರಾಮೀಣ ವಿದ್ಯಾರ್ಥಿಯಾದ ನಾನು ಮುರಾರ್ಜಿ ವಸತಿ ಶಾಲೆಗೆ ಪ್ರವೇಶ ಬಯಸಿ ಪರೀಕ್ಷೆ ಬರೆದು ಬರಗೂರು ಮುರಾರ್ಜಿ ವಸತಿ ಶಾಲೆಗೆ ಆಯ್ಕೆಗೊಂಡೆ. ಇಂಗ್ಲಿಷ್ ಮಾಧ್ಯಮ ಆದ ಕಾರಣ ಆರಂಭದಲ್ಲಿ ನನಗೆ ಕಷ್ಟವಾಯಿತು. ನನ್ನ ಗುರುಗಳು ನೀಡಿದ ಪಾಠ ಪ್ರವಚನ, ಮಾರ್ಗದರ್ಶನ ನಾನು ಇಷ್ಟೊಂದು ಅಂಕ ಪಡೆಯಲು ನೆರವಾಯಿತು. ವಿಜ್ಞಾನ ವಿಷಯದಲ್ಲಿ 2 ಅಂಕ ಕಡಿಮೆ ಬಂದಿದೆ. ಉಳಿದ ಎಲ್ಲಾ ವಿಷಯಗಳಲ್ಲಿ ಶೇ.100ಕ್ಕೆ 100 ಅಂಕ ಪಡೆದಿದ್ದೇನೆ. ತುಂಬಾ ಖುಷಿ ಇದೆ. ಮುಂದೆ ಇದೇ ನಿಟ್ಟಿನಲ್ಲಿ ವಿದ್ಯಾಭ್ಯಾಸ ಮಾಡಿ ಐಎಎಸ್ ಮಾಡುವ ಮನದಾಸೆಯನ್ನು ಹೊಂದಿದ್ದೇನೆ. ಇದನ್ನು ಸಾಧಿಸುವ ಛಲ ಕೂಡ ನನ್ನಲ್ಲಿದೆ ಎಂದು ಸಾಧಕಿ ವರ್ಷಿತ ಖುಷಿ ವ್ಯಕ್ತಪಡಿಸಿದಳು.

# ಸುಹಾಸ್ ಶೆಟ್ಟಿ ಹತ್ಯೆ ಖಂಡಿಸಿ ಬಿಜೆಪಿ ಪ್ರತಿಭಟನೆ



ಹಾಸನ: ಮಂಗಳೂರಿನಲ್ಲಿ ನಡೆದ ಹಿಂದು ಕಾರ್ಯಕರ್ತ ಸುಹಾಸ್ ಶೆಟ್ಟಿ ಅವರ ಹತ್ಯೆ ಖಂಡಿಸಿ ಬಿಜೆಪಿ ಕಾರ್ಯಕರ್ತರು ಶುಕ್ರವಾರ ನಗರದ ಹೇಮಾವತಿ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿದರು.

ಬಿಜೆಪಿ ನಗರಾಧ್ಯಕ್ಷ ಯೋಗೇಶ್ ಗೌಡ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಲೆಲ್ಲ ಹಿಂದುಗಳ ಮಾರಣ ಹೋಮ ನಡೆಯುತ್ತದೆ. ಬಿಜೆಪಿಯ ನಿಷ್ಠಾವಂತ ಕಾರ್ಯಕರ್ತನನ್ನು ಅಮಾನುಷವಾಗಿ ಹತ್ಯೆ ಮಾಡಲಾಗಿದೆ. ಪ್ರಕರಣದ ಆರೋಪಿಗಳನ್ನು ಶೀಘ್ರ ಪತ್ತೆ ಹಚ್ಚಿ ಗಲ್ಲು ಶಿಕ್ಷೆಗೆ ಗುರಿಪಡಿಸಬೇಕು ಎಂದು ಆಗ್ರಹಿಸಿದರು.

# ಬಿತ್ತನೆ ಬೀಜ, ರಸಗೊಬ್ಬರಕ್ಕೆ ಸಮಸ್ಯೆಯಾಗದಿರಲಿ

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸೂಚನೆ | ಪ್ರಗತಿ ಪರಿಶೀಲನಾ ಸಭೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರೈತರ ಬೇಡಿಕೆಗಳಿಗೆ ಅನುಗುಣವಾಗಿ ಬಿತ್ತನೆ ಬೀಜ ಹಾಗೂ ರಸಗೊಬ್ಬರ ಒದಗಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಖುಷ್ಬೂ ಗೋಯಲ್ ಚೌಧರಿ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ 2024-25ನೇ ಸಾಲಿನ ಮಾರ್ಚ್ 2025ರ ಮಾಹೆಯ ಅಂತ್ಯದ ಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಹನಿ ನೀರಾವರಿ ಯೋಜನೆಯಲ್ಲಿ ಹಾಗೂ ಕೃಷಿ ಯಾಂತ್ರೀಕರಣ ಸೇರಿ ಕೃಷಿಭಾಗ್ಯ ಯೋಜನೆಯಡಿ ಅರ್ಹರಿಗೆ ದೊರಕುವಂತೆ ನೋಡಿಕೊಳ್ಳಲು ತಿಳಿಸಿದರು.

ಆಲೂಗೆಡ್ಡೆ ಬೆಳೆಯೂ ಹಾಸನ ಜಿಲ್ಲೆಯ ಪ್ರಮುಖ ಬೆಳೆಯಾಗಿದ್ದು, ತೋಟಗಾರಿಕೆ ಇಲಾಖೆಯ ವತಿಯಿಂದ ಆಲೂಗೆಡ್ಡೆ ಬೆಳೆಗೆ ಅಗತ್ಯವಿರುವ ಔಷಧಿ ಹಾಗೂ ಕ್ರಿಮಿನಾಶಕಗಳನ್ನು ಸಬ್ಸಿಡಿ ರೂಪದಲ್ಲಿ ನೀಡಲು ಪ್ರಸ್ತಾವನೆ ಸಲ್ಲಿಸಲಾಗಿದೆ ಇದು ಅನುಮೋದನೆಯಾದರೆ ಇದರಿಂದ ರೈತರಿಗೆ ಅನುಕೂಲವಾಗುತ್ತದೆ ಎಂದು ತೋಟಗಾರಿಕೆ ಇಲಾಖೆ ಉಪ ನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು. ಸರ್ಕಾರದ ಹಂತದಲ್ಲಿ ಮಾತನಾಡಿ ಬಗೆಹರಿಸಲು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.



ಹನಿ ನೀರಾವರಿ ಹಾಗೂ ತೋಟಗಾರಿಕೆ ಬೆಳೆಗಳನ್ನು ಕೀಟ ಮತ್ತು ರೋಗಗಳ ನಿಯಂತ್ರಣಕ್ಕೆ ಅಗತ್ಯ ಮುನ್ನೆಚ್ಚರಿಕೆ ಕ್ರಮವಹಿಸಬೇಕು. ಜಾನುವಾರುಗಳಿಗೆ ಕಾಲು ಬಾಯಿ ರೋಗಗಳಿಗೆ ಕಾಲ ಕಾಲಕ್ಕೆ ಸರಿಯಾಗಿ ಲಸಿಕೆ ಹಾಕಲು ಕ್ರಮವಹಿಸುವಂತೆ ಸೂಚಿಸಿದರು.

ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಸಿಟಿವಿ ಲಿಂಕ್‌ಗಳನ್ನು ಜಿಲ್ಲಾ ಆರೋಗ್ಯಾಧಿಕಾರಿ ಕಚೇರಿಯಲ್ಲಿ ವೀಕ್ಷಣೆ ಮಾಡಬೇಕು. ವೈದ್ಯರು, ಸಿಬ್ಬಂದಿ ಸರಿಯಾದ ಸಮಯಕ್ಕೆ ಆಸ್ಪತ್ರೆಗಳಿಗೆ ಬರುವುದನ್ನು ಪರಿಶೀಲಿಸುವಂತೆ ತಿಳಿಸಿದರು.

ಜಿಲ್ಲೆಯಲ್ಲಿ ಯಾವುದೇ ರೀತಿಯಲ್ಲಿ ಗರ್ಭಿಣಿಯರು ಹಾಗೂ ನವಜಾತ ಶಿಶುಗಳ ಸಾವು ಆಗದಂತೆ ಕ್ರಮ ವಹಿಸಬೇಕು ಎಂದರು.

ಶಾಲಾ ಕೊಠಡಿ ದುರಸ್ತಿಗಳು ಕೂಡಲೇ ಆಗಬೇಕು. ಯಾವುದೇ ಸಮಸ್ಯೆಗಳು ಉಂಟಾದಲ್ಲಿ ಅಧಿಕಾರಿಗಳ ಗಮನಕ್ಕೆ ತಂದು ಬಗೆಹರಿಸಿಕೊಂಡು ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಅಧಿಕಾರಿಗಳು ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳಲ್ಲಿ ಹಾಗೂ ವಸತಿ ಶಾಲೆಗಳಲ್ಲಿ ಯಾವುದೇ ತೊಂದರೆಯಾಗದಂತೆ ನಿಗಾ ವಹಿಸಲು ತಿಳಿಸಿದರು.

ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು. ರಜೆ ದಿನಗಳಲ್ಲಿ ಹೆಚ್ಚಿನ ಬಸ್‌ಗಳ ವ್ಯವಸ್ಥೆ ಕಲ್ಪಿಸುವಂತೆ ಹಾಗೂ ವಿದ್ಯಾರ್ಥಿಗಳ ಬಸ್ ಸಂಚಾರಕ್ಕೆ ಯಾವುದೇ ರೀತಿ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಎಂದರು. ಜಿಲ್ಲಾಧಿಕಾರಿ ಸಿ. ಸತ್ಯಭಾಮ ಮಾತನಾಡಿ, ಮಳೆಯಿಂದ ಹಾನಿಯಾದ ಮನೆಗಳಿಗೆ ನೇರವಾಗಿ ಪರಿಹಾರ ಪಾವತಿಸಲಾಗುತ್ತಿದೆ. ಜಿಲ್ಲೆಯಲ್ಲಿ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ ನಿಯಮಾನುಸಾರ ಅಗತ್ಯ ಕ್ರಮಕೈಗೊಳ್ಳಲಾಗುವುದು. ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ನಿವೇಶನಗಳನ್ನು ಗುರುತಿಸಿ ಅನುಮೋದನೆ ಪಡೆಯುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ವಸತಿ ನಿಲಯಗಳ ನಿರ್ಮಾಣಕ್ಕೆ ಯಾವುದೇ ರೀತಿಯ ನಿವೇಶನಗಳಿಗೆ ತೊಂದರೆಯಾಗಬಾರದು ಅಗತ್ಯವಿದ್ದರೆ ಸ್ಥಳ ಗುರುತಿಸಿ ಅನುಮೋದನೆ ಪಡೆಯುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಜಿಲ್ಲೆಯಲ್ಲಿ 26 ಮರಳು ನಿಕ್ಷೇಪಗಳನ್ನು ಗುರುತಿಸಲಾಗಿದ್ದು, ಹರಾಜು ಪ್ರಕ್ರಿಯೆ ಪ್ರಗತಿಯಲ್ಲಿದೆ ಹಾಗು ಸಿ.ಎಸ್.ಆರ್ ನಿಧಿಯಡಿ ಯೋಜನೆಗಳನ್ನು ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಬಿ. ಆರ್ ಪೂರ್ಣಿಮಾ ಮಾತನಾಡಿ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಅಗತ್ಯವಿರುವ ಶಾಲೆಗಳಿಗೆ ಅಡುಗೆ ಮನೆಗಳ ನಿರ್ಮಾಣ ಕೈಗೊಳ್ಳಲಾಗುತ್ತಿದೆ ಎಂದರು.

ಉಪ ವಿಭಾಗಾಧಿಕಾರಿಗಳಾದ ಮಾರುತಿ, ಡಾ. ಶೃತಿ ಹಾಗೂ ಇತರರಿದ್ದರು.

# ಇತಿಹಾಸದಲ್ಲಿ ಈ ದಿನ

## ಮೇ -4

**1776:** ಅಮೆರಿಕದ ಕ್ರಾಂತಿ: ರೋಡ್ ಐಲ್ಯಾಂಡ್ ಬ್ರಿಟಿಷ್ ಸಾಮ್ರಾಜ್ಯದಿಂದ ಹೊರಬಂದ ಮೊದಲ ರಾಜ್ಯವಾಯಿತು.

**1854:** ಭಾರತದಲ್ಲಿ ಮೊದಲ ರೈಲು ತಾಣ ಬೆಂಗಳೂರಿನಲ್ಲಿ ಸ್ಥಾಪಿಸಲಾಯಿತು.

**1979:** ಮಾರ್ಗರೆಟ್ ಥ್ಯಾಚರ್ ಬ್ರಿಟನ್‌ನ ಪ್ರಥಮ ಮಹಿಳಾ ಪ್ರಧಾನಿ ಆದರು.

**1998:** ಅಡುಗೆಯ ಅನಿಲ ಸೋರಿಕೆಯ ಕಾರಣದಿಂದ ಕೊಯಂಬತ್ತೂರಿನಲ್ಲಿ ಭೀಕರ ಸ್ಫೋಟ, ಹಲವರು ಮೃತ.

**2000:** ಲವಕಾರದಲ್ಲಿ ತಯಾರಾದ ಮೊದಲ ವೈಜ್ಞಾನಿಕ ಮಾನವ ಜೀವಕೋಶ ನಕ್ಷೆ ಪ್ರಕಟವಾಯಿತು.

**ಜನನ**

**1929:** ಓಡ್ರಿ ಹೆಪ್ಬರ್ನ್, ಬ್ರಿಟಿಷ್-ಬೆಲ್ಜಿಯನ್ ನಟಿ.

**1825:** ಥಾಮಸ್ ಹೆನರಿ ಹಾಕ್ಸ್, ಬ್ಲೆಮಿಶ್ ವಿಜ್ಞಾನಿ.

**1904:** ಓಲಿವರ್ ಬಟ್ಲರ್, ಇಂಗ್ಲಿಷ್ ಕ್ರಿಕೆಟಿಗ.

**ಮರಣ**

**1615:** ಅಲ್ಲೊನ್ ಕಾ ಸ್ಟಾರ್, ಶೇಕ್ಸಪಿಯರ್ ಕಾಲದ ಕವಿ.

**1928:** ಶರದ್ ಬಾಬು, ಭಾರತೀಯ ಸ್ವಾತಂತ್ರ್ಯ ಹೋರಾಟಗಾರ.

**2014:** ರಘುನಾಥ್ ಪಣಿಕರ್, ಖ್ಯಾತ ಮಲಯಾಳಂ ಕವಿ ಮತ್ತು ಲೇಖಕ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248